ಆ) ಮೇಲ್ಕಾಣಿಸಿದ ಖಾಲಿ ಹುದ್ದೆಗಳನ್ನು ಲೋಕೋಪಯೋಗಿ ಇಲಾಖೆಯ ಇಂಜಿನಿಯರಿಂಗ್ ಸಿಬ್ಬಂದಿಯನ್ನು ಎರವಲು ಸೇವೆಯ ಮೇಲೆ ತೆಗೆದುಕೊಳ್ಳುವ ಮೂಲಕ ತುಂಬಲು ಕ್ರಮ ವಹಿಸಲಾಗುತ್ತಿದೆ.

ರಾಜ್ಯದಲ್ಲಿ ಖಾಲಿ ಇರುವ ಇ.ಓ.ಗಳು ಮತ್ತು ಪರಿವೀಕ್ಷಕರ ಹುದ್ದೆಗಳು

2943 - ಶ್ರೀ. ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ರಾಜ್ಯದಲ್ಲಿ ಖಾಲಿಯಿರುವ ವಿದ್ಯಾಧಿಕಾರಿಗಳ ಹುದ್ದೆಗಳೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

2) ಇವುಗಳನ್ನು ಭರ್ತಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

3) ರಾಜ್ಯದಲ್ಲಿ ಖಾಲಿಯಿರುವ ವಿಷಯ ಪರಿವೀಕ್ಷಕರ ಹುದ್ದೆಗಳೆಷ್ಟು ?

4) ಇವುಗಳನ್ನು ಭರ್ತಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 14. ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.

ಆ) ಈ ಖಾಲಿ ಹುದ್ದೆಗಳನ್ನು ಸಧ್ಯದಲ್ಲಿಯೇ ತುಂಬಲಾಗುವುದು.

ಇ) 24

ಈ) ಖಾಲಿಯಿರುವ ಈ ಹುದ್ದೆಗಳನ್ನ ಅರ್ಹ ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರುಗಳಿಗೆ ವಿಷಯ ಪರಿವೀಕ್ಷಕರಾಗಿ ಬಡ್ತಿ ನೀಡುವ ಮೂಲಕ ಸಧ್ಯದಲ್ಲಿಯೇ ತುಂಬಲಾಗುವುದು.

ಅನುಬಂಧ

ಕ್ರಮ	ಜಿಲ್ಲೆಯ ಹೆಸರು	ಕ್ಷೇತ್ರ ಶಿಕ್ಷಣಾಧಿಕಾರಿ	ಶಿಕ್ಷಣಾಧಿಕಾರಿಗಳು	ಪಿ.ಟಿ.ಇ ಉಪನ್ಯಾಸಕರು	ಡಯಟ್-ಹಿರಿಯ ಉಪನ್ಯಾಸಕರು	ಇತರೆ
1	ಬೆಂಗಳೂರು ಗ್ರಾ.	-	-	-	-	-
2	ಬೆಂಗಳೂರು (ದ)	-	-	-	-	-
3	ಬೆಂಗಳೂರು (ಉ)	-	-	-	-	-
4	ತುಮಕೂರು	-	-	-	-	-
5	ಕೋಲಾರ	-	1	-	1	-
6	ಚಿತ್ರದುರ್ಗ	-	-	-	-	-
7	ದಾವಣಗೆರೆ	-	-	-	-	-
8	ಶಿವಮೊಗ್ಗ	-	-	-	-	-
9	ಮೈಸೂರು	-	-	-	-	-
10	ಚಾಮರಾಜನಗರ	-	-	-	-	-
11	ಮಂಡ್ಯ	-	-	-	-	-
12	ಹಾಸನ	-	-	-	-	-
13	ಚಿಕ್ಕಮಗಳೂರು	-	-	-	-	-
14	ಕೊಡಗು	-	1	-	-	-
15	ದಕ್ಷಿಣ ಕನ್ನಡ	-	2	-	-	-

ಕ್ರಮ	ಜಿಲ್ಲೆಯ ಹೆಸರು	ಕ್ಷೇತ್ರ ಶಿಕ್ಷಣಾಧಿಕಾರಿ	ಶಿಕ್ಷಣಾಧಿಕಾರಿಗಳು	ಸಿ.ಟಿ.ಇ ಉಪನ್ಯಾಸಕರು	ಡಯಟ್-ಹಿರಿಯ ಉಪನ್ಯಾಸಕರು	ಇತರೆ
16	ಉಡುಪಿ	-	1	-	-	-
17.	ಬೆಳಗಾವಿ	-	-	-	-	-
18	ಬಿಜಾಪುರ	-	2	-	-	-
19	ಬಾಗಲಕೋಟೆ	-	1	-	-	-
20	ಧಾರವಾಡ	-	-	-	-	-
21	ಗದಗ್	-	-	-	-	-
22	ಹಾವೇರಿ	-	-	-	-	-
23	ಉತ್ತರ ಕನ್ನಡ	-	-	-	-	-
24	ಗುಲ್ಬರ್ಗಾ	-	1	-	-	-
25	ಬೀದರ್	-	2	-	-	-
26	ರಾಯಚೂರು	-	1	-	-	-
27	ಕೊಪ್ಪಳ	-	1	-	-	-
28	ಬಳ್ಳಾರಿ	-	1	-	-	-
	ಒಟ್ಟು	-	**14**	-	-	-